ಅ) ೧ ರಿಂದ ೭ನೇ ತರಗತಿವರೆಗಿನ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಠ್ಯ ಪುಸ್ತಕಗಳನ್ನು ನೀಡಿರುವ ವ್ಯವಸ್ಥೆಯನ್ನು ಈ ವರ್ಷ ಸಹ ಮುಂದುವರಿಸಲಾಗುವುದೆ?

ಆ) ಹಾಗಿದ್ದಲ್ಲಿ ಈ ವರ್ಷ ಇದುವರೆಗೆ ಬೆಳಗಾಂ ಮತ್ತು ಧಾರವಾಡ ಜಿಲ್ಲೆಯಲ್ಲಿ ಪುಸ್ತಕಗಳು ವಿದ್ಯಾರ್ಥಿಗಳಿಗೆ ಒದಗಿಸದೆ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಳ್ಳಲುದ್ದೇಶಿಸಿರುವ ಕ್ರಮವೇನು ?

ಶ್ರೀ ಕೆ. ಹೆಚ್. ರಂಗನಾಥ್. (ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ಇಲ್ಲ.

ಆ) ಪೂರೈಕೆ ಹಾಗೂ ವಿತರಣೆ ಬಗ್ಗೆ ಈ ಜಿಲ್ಲೆಗಳಿಂದ ಯಾವ ದೂರು ಬಂದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶಿವಮೊಗ್ಗ ನಗರದಲ್ಲಿ ಹರಿಜನ, ಗಿರಿಜನರಿಗೆ ಹೌಸಿಂಗ್ ಬೋರ್ಡ್ ಮನೆಗಳನ್ನು ಕೊಡುವ ಬಗ್ಗೆ

೭೬೯ (೧೧೫೬) ಶ್ರೀ ಕರಿಯಣ್ಣ (ಹೊಳೆ ಹೊನ್ನೂರು).—ಮಾನ್ಯ ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಶಿವಮೊಗ್ಗ ನಗರದಲ್ಲಿ ೧೯೮೦ರ ವರ್ಷದಿಂದ ೧೯೯೦ನೇ ಮಾರ್ಚಿವರೆಗೆ ಎಷ್ಟು ಹೌಸಿಂಗ್ ಬೋರ್ಡ್ ಮನೆಗಳನ್ನು ಕಟ್ಟಿರುತ್ತಾರೆ ?

ಆ) ಇದರಲ್ಲಿ ಹರಿಜನ ಗಿರಿಜನರಿಗೆ ಎಷ್ಟು ಮನೆಗಳನ್ನು ಕೊಟ್ಟಿರುತ್ತಾರೆ ?

ಶ್ರೀ ಟಿ. ಎನ್. ನರಸಿಂಹ ಮೂರ್ತಿ (ಬಂದರು, ಮೀನುಗಾರಿಕೆ ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ೯೭೩ ಮನೆಗಳನ್ನು ಕಟ್ಟಿರುತ್ತಾರೆ.

ಆ) ಇದರಲ್ಲಿ ಹರಿಜನ, ಗಿರಿಜನರಿಗಾಗಿ ೬೬ ಮನೆಗಳನ್ನು ಕೊಟ್ಟಿರುತ್ತಾರೆ.

ಚಿತ್ತಾಪುರ ಪಟ್ಟಣದ ನೀರು ಸರಬರಾಜು ಯೋಜನೆಯ ಬಗ್ಗೆ

೭೭೧ (೧೭೦೨) ಶ್ರೀ ಬಾಬೂರಾವ್ ಚಿಂಚನೂರ್, (ಚಿತ್ತಾಪುರ).—ಮಾನ್ಯ ಬಂದರು, ಮೀನುಗಾರಿಕೆ ವಸತಿ ಮತ್ತು ನಗರಾಭಿವೃದ್ಧಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ: —

ಅ) ಚಿತ್ತಾಪುರ ಟೌನಿನ ಕುಡಿಯುವ ನೀರಿನ ಸಮಸ್ಯೆಯನ್ನು ಸರಿಪಡಿಸಲು ಒಂದು ಓವರ್ ಹೆಡ್ ಟ್ಯಾಂಕ್ ಅನ್ನು ನಿರ್ಮಿಸಬೇಕಾಗಿರುವುದು ನಿಜವಲ್ಲವೆ ?

ಆ) ಹಾಗಿದ್ದಲ್ಲಿ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಹಾಗೂ ಸರ್ಕಾರದವರು ಈ ದಿಸೆಯಲ್ಲಿ ಕೈಗೊಂಡ ಕ್ರಮಗಳೇನು ?

ಇ) ಎಷ್ಟು ಸಮಯದೊಳಗೆ ಈ ಟೌನಿಗೆ ಕುಡಿಯುವ ನೀರಿನ ಟ್ಯಾಂಕ್ ಅನ್ನು ನಿರ್ಮಿಸಿ, ನೀರಿನ ಸಮಸ್ಯೆಯನ್ನು ಬಗೆಹರಿಸಲಾಗುವುದು ?

ಶ್ರೀ ಟಿ. ಎನ್. ನರಸಿಂಹ ಮೂರ್ತಿ (ಬಂದರು, ಮೀನುಗಾರಿಕೆ ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಹೌದು.

ಆ) ಚಿತ್ತಾಪುರ ಪಟ್ಟಣಕ್ಕೆ ನೀರು ಸುಧಾರಣೆಯ ಯೋಜನೆಯನ್ನು ರೂ. ೮೬.೦೦ ಲಕ್ಷಕ್ಕೆ ಆಡಳಿತ ಅನುಮೋದನೆ ನೀಡಲು ಸರ್ಕಾರದ ಪರಿಶೀಲನೆಯಲ್ಲಿದೆ. ಶೀಘ್ರದಲ್ಲಿಯೇ ಆಡಳಿತ ಮಂಜೂರಾತಿ ನೀಡಲಾಗುವುದು.

ಇ) ಈ ಯೋಜನೆಯನ್ನು ಕೈಗೆತ್ತಿಕೊಂಡ ಎರಡು ವರ್ಷದೊಳಗೆ ಮೇಲ್ಮಟ್ಟ ಜಲಸಂಗ್ರಹಗಾರಗಳನ್ನು ಸೇರಿ ಯೋಜನೆಯನ್ನು ಮುಗಿಸಲಾಗುವುದು.